(*b*) if so, when the Government would issue orders to change these name boards ?

Sri D. DEVARAJ URS (Chief Minister).—

(*a*) and (*b*) Circular instructions have been issued ordering that wherever the name plates are only in English, the names of the office or/and officer be written in Kannada also.

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಾಜ್ಯದಲ್ಲಿ ಇರುವ ರಸ್ತೆಗಳು, ಸರಕಾರಿ ಕಚೇರಿಗಳು ವಿಧಾನಸೌಧವೂ ಸೇರಿ ಇವೆಲ್ಲಕ್ಕೂ ಕನ್ನಡದಲ್ಲೇ ಹೆಸರಿನ ಬೋರ್ಡುಗಳಿರಬೇಕಾದ್ದು ಅವಶ್ಯಕ, ಇಂಗ್ಲೀಷಿನಲ್ಲಿರಬೇಕಾದ ಪ್ರಮೇಯವಿಲ್ಲ. ಆದುದರಿಂದ ಸಂಪೂರ್ಣವಾಗಿ ಇಂಗ್ಲೀಷಿನಲ್ಲಿರುವ ಬೋರ್ಡುಗಳನ್ನು ತೆಗೆದು ಕನ್ನಡದಲ್ಲೇ ಇರುವಂತೆ ಮಾಡುವಿರಾ ? ಹೊರಗಡೆ ಕೂಡ ಎಲ್ಲಾ ಬೋರ್ಡುಗಳೂ ಕೂಡ ಕನ್ನಡದಲ್ಲೇ ಇರಬೇಕು. ಇದರ ಬಗ್ಗೆ ಯೋಚನೆ ಮಾಡುವಿರಾ ?

†ಶ್ರೀ ಡಿ. ದೇವರಾಜ ಅರಸ್.—ಕನ್ನಡದ ಬೋರ್ಡುಗಳನ್ನು ಹಾಕಬೇಕೆಂದು ಆಜ್ಞೆ ಮಾಡಲಾಗಿದೆ. ಕೆಲವು ಕಡೆ ಕನ್ನಡದ ಬೋರ್ಡಿನ ಜೊತೆಗೆ ಇಂಗ್ಲೀಷಿನ ಬೋರ್ಡು ಇರಬೇಕೆಂದು ಹೇಳಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಕನ್ನಡದ ನಾಮಫಲಕ ಸರಕಾರಿ ಕಛೇರಿಗಳಲ್ಲಿ ಅಲ್ಲದೆ ಖಾಸಗಿಯವರ ಅಂಗಡಿ ಮುಂತಾದ ಕಡೆಗಳಲ್ಲೂ ಇರುವಂತೆ ಸೂಚನೆ ಕೊಡುವಿರಾ ?

ಶ್ರೀ ಡಿ. ದೇವರಾಜ ಅರಸ್.—ಹೋಟಲು, ಅಂಗಡಿ ಮುಂತಾದ ಕಡೆಗಳಲ್ಲಿ ಇಂಗ್ಲೀಷಿನಲ್ಲಿ ಬೋರ್ಡ್ ಇದ್ದರೆ ಕನ್ನಡದಲ್ಲೇ ಹಾಕಿ ಎಂದು ಒತ್ತಾಯಮಾಡುವುದು ಹೇಗೆ ?

ಶ್ರೀ ವಾಟಾಳ್ ನಾಗರಾಜ.—ವಿಧಾನಸೌಧದಲ್ಲಿ ಇಂಗ್ಲೀಷಿನಲ್ಲಿರುವುದನ್ನು ಕನ್ನಡಕ್ಕೆ ಸರಿಯಾಗಿ ತರ್ಜುಮೆ ಮಾಡುತ್ತಿಲ್ಲ, ಅಂಡರ್ ಸೆಕ್ರೆಟರಿ ಎಂಬುದಕ್ಕೆ ಪಾರ್ಶ್ವಕ ಎಂದು ಹಾಕಿದ್ದಾರೆ. ಕನ್ನಡ ಬಾರದಿರುವವರ ಕೈಯಲ್ಲಿ ತರ್ಜುಮೆ ಮಾಡಿಸಿದ್ದಾರೆ ಎಂದು ಕಾಣುತ್ತದೆ. ಸರಿಯಾಗಿ ಕನ್ನಡ ಬರುವವರ ಕೈಯಲ್ಲಿ ತರ್ಜುಮೆ ಮಾಡಿಸಿ ಸರಿಯಾದ ಕನ್ನಡ ಪದ ಬಳಸುವಂತೆ ಮಾಡುವಿರಾ? ಬೇಕಾದರೆ ಸಾಹಿತ್ಯ ಪರಿಷತ್ತು ಮುಂತಾದ ಕಡೆಗಳಿಂದ ಅದಕ್ಕೆ ಬೇಕಾದ ಸಹಾಯವನ್ನು ಪಡೆದು ಕೊಳ್ಳಬಹುದು.

2-00 P.M.

ಶ್ರೀ ಡಿ. ದೇವರಾಜ ಅರಸ್.—ಅವರ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತು ತರ್ಜುಮೆ ಮಾಡತಕ್ಕ ಒಂದು ಕಷ್ಟ ಏನಿದೆ ಅದನ್ನು ಅವರು ಯೋಚನೆ ಮಾಡುವುದು ಒಳ್ಳೆಯದು. ಹೆಚ್ಚು ಪಾಂಡಿತ್ಯ ಪಡೆದವರಿಗೆ ಕರೆ ಕಳುಹಿಸೋಣ, ಅವರು ಸುಲಭ ಪದಗಳನ್ನು ಕೊಟ್ಟರೆ ಹಾಕೋಣ. ನನ್ನ ಅಭ್ಯಂತರವಿಲ್ಲ, ನಮ್ಮಲ್ಲಿ ರೀಜನಲ್‌ಮೈಸ್ ಬಳಕೆಯಲ್ಲಿರುವ ಕನ್ನಡ ಇದೆ. ದಕ್ಷಿಣ ಕನ್ನಡಭಾಗದಲ್ಲಿ ಮಾತನಾಡುವ ಕನ್ನಡ ಬೇರೆ, ಕಾಲೇಜು ಎನ್ನುವುದಕ್ಕೆ ಕೋಲೇಜ್ ಎಂದು ಬರೆಯುತ್ತಾರೆ, ಧಾರವಾಡದ ಕಡೆ ಕನ್ನಡ ಪದಗಳು ಬೇರೆಬೇರೆಯಾಗುತ್ತವೆ. Unless it is verified ಅದನ್ನು ನಾನು ತಪ್ಪು ಎಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಕನ್ನಡ ತರ್ಜುಮೆ ಮಾಡುವವರು ಯಾವ ರೀಜನ್‌ನಿಂದ ಬಂದಿರುತ್ತಾರೋ ಆ ಭಾಷೆಯನ್ನು ಅವರು ಉಪಯೋಗ ಮಾಡಿರುತ್ತಾರೆ. ನಿನ್ನೆ ಮಾನ್ಯ ಸದಸ್ಯರು ಒಬ್ಬರು ಹೇಳುತ್ತಿದ್ದರು, 'ರನ್ನನ ಕಥೆಯ ರೀತಿಯಲ್ಲಿ ಒದರಿದರು' ಎಂದು. ಸಾಮಾನ್ಯವಾಗಿ ಒದುರೋದು ಎಂದು ನಾವು ಮಾತನಾಡಿದರೆ ಆ ಕಡೆಯವರು ಆಕ್ಷೇಪಣೆ ಮಾಡುತ್ತಾರೆ.

Grant of Plot in Bangalore to Ex-M. P. from Gulbarga

783. Sri MALLIKARJUNA KHARGE (Gurmitkal).—

Will the Minister for Municipel Administration be pleased to state :—

(*a*) whether the Government has granted a plot at Jayamahal Extension to Sri Mahadevappa Rampure, Ex-M. P. from Gulbarga for starting of Arts College at Bangalore in the name of Hyderabad Education Society ;

(*b*) whether the Government has made any enquiry about illegal collection of amount in the name of Society ?

Sri B. BASAVALINGAPPA (Minister for Municipal Administration).

(*a*) No.

(*b*) No.

Sri MALLIKARJUNA KHARGE.—Is it a fact that the Mysore Government has given the same plot which was sanctioned to the People's Education Society Bombay, to Hyderabad Karnatak Educa-Society, Gulbarga—to late Sri Mahadevappa Rampure ?

† Sri B. BASAVALINGAPPA.—That site is not given to Mahadevappa Rampure.

Sri MALLIKARJUNA KHARGE.—One year back the people of Gulbarga represented regarding illegal collection of amount to establish a College in Bangalore. What action has the Government taken to establish a College in Bangalore City by Sri Mahadevappa Rampure ?

Sri B. BASAVALINGAPPA.—If there are illegal collections by certain individuals, people who are aggrieved must go to the proper forum.

Sri H. D. DEVE GOWDA.—If any illegal collection is made by an Institution recognised by the State Government, then Government must take action. I don't think there is any difficulty in taking action against an institution which is recognised by the Government in case it is involved in illegal actions. May I know the reaction of the Government ?

Sri B. BASAVALINGAPPA.—So far, we have not received any complaint about this.

Veterinary Dispensary at Koppa

812. Sri A. D. BILI GOWDA (Maddur).—

Will the Minister of State for Animal Husbandry be pleased to state :—

whether there is any proposal to provide a full-pledged Veterinary at Dispensary for Koppa in Muddur Taluk ?

Sri N. CHIKKE GOWDA (Minister of State for Animal Husbandry).–

Yes.

ಶ್ರೀ ಎ. ಡಿ. ಬಿಳೀಗೌಡ.—ಸ್ವಾಮಿ 25 ಮೈಲಿಗಳ ದೂರದಲ್ಲಿ ಪಶು ವೈದ್ಯಶಾಲೆಯ ಸೌಲಭ್ಯ ಇಲ್ಲದೆ ಇರುವುದರಿಂದ, ಆದಷ್ಟು ಬೇಗ ಪಶು ವೈದ್ಯ ಶಾಲೆಯನ್ನು ಮಾಡಿಕೊಡುತ್ತೀರಾ ?

† Sri N. CHIKKE GOWDA.—Subsequent to this reply three days back, Government have sanctioned upgrading of Government Veterinary Dispensary at Koppa.

Grant of Land for Cultivation in Bandehalli Forest Area

869. Sri C. BYRE GOWDA (Vemgal).—

Will the Minister for Agriculture and Forests be pleased to state :—

(*a*) whether the Government is aware of the sathyagraha from 25-8-1972 to 4-9-1972 by the agricultural workers and poor peasants of Egaleti-Thimmasandra and other villages of Sidlagatta taluk in Kolar District for grant of lands for cultivation in the Bandehalli Forest Area ;

(*b*) the number of persons arrested for taking part in the above satyagraha ;

(*c*) whether it is not a fact that the Government had declared in 1970 that the 600 acres of land will be granted to the landless peasants in the above area ;

(*d*) if so, the steps taken to distribute those lands to the land less and poor peasants ?

Sri K. H. PATIL (Minister for Agriculture).—

(*a*) Yes.

(*b*) 375 persons.

(*c*) No.

(*d*) Does not arise.

ಶ್ರೀ ಸಿ. ಬೈರೇಗೌಡ.—ತಾವು ಭೂದಾನ ಚಳುವಳಿಯ ಬಗ್ಗೆ ಗೊತ್ತಿದೆ ಎಂದು ಹೇಳಿದ್ದೀರಿ, ಮತ್ತು 375 ಜನ ವ್ಯಕ್ತಿಗಳನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ, ಒಂದು ಸಾರಿ ಅರೆಸ್ಟ್ ಆದಮೇಲೆ, ಮತ್ತೊಂದು ಸಾರಿ ಜಿಲ್ಲೆಯಿಂದ ಹೊರಗಡೆ ಅದೇ ವ್ಯಕ್ತಿಗಳನ್ನು ಹಾಕುವ ಬಗ್ಗೆ ನೋಟೀಸ್ ಕೊಟ್ಟಿರತಕ್ಕಂಥಾದ್ದು ನರಿಯೇ ?

† ಶ್ರೀ ಕೆ. ಎಚ್. ಪಾಟೀಲ್.—ಹ್ಯಾಬ್ಯುಚಯಲ್ ಅಫೆಂಡರ್ಸ್ ಇದ್ದರೆ ಹೊರಗೆ ಹಾಕ ಬೇಕು ಎಂದು ಕಾಯಿದೆಯಲ್ಲಿ ಪ್ರಾವಿಷನ್ ಇದೆ. ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.—ನಾವು ದರೋಡೆ ಮಾಡುವುದಕ್ಕೆ ಹೋಗಲಿಲ್ಲ, ಪ್ರಜಾಸತ್ತಾತ್ಮಕವಾದ ನೀತಿಯನ್ನು ಅನುಸರಿಸಿ, ಪ್ರಜಾಸತ್ತಾತ್ಮಕವಾದ ಸತ್ಯಾಗ್ರಹವನ್ನು ನಡೆಸಿರತಕ್ಕಾಂಥಾದ್ದು ಇಂಥ ಹಕ್ಕನ್ನು ಕಸಿದುಕೊಳ್ಳುವ ದೃಷ್ಟಿಯಿಂದ ನೀವು ಅವರನ್ನು ಜಿಲ್ಲೆಯ ಹೊರಗಡೆ ಹಾಕುವುದು ನರಿಯೇ ?